**III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ**

**ಎಸ್ ಸಿ ಪ್ರಕರಣ ಸಂಖ್ಯೆ 105/2024**

ಪಿರ್ಯಾದಿ : ಎಂ ಕೆ ದೊಡ್ಡಿ ಆರಕ್ಷಕ ಠಾಣೆ,
ರಾಜ್ಯದ ಪರವಾಗಿ

ವಿರುದ್ಧ

ಆರೋಪಿತರು : 1. ದೊಡ್ಡಯ್ಯ ಅಲಿಯಾಸ್ ಪುಟ್ಟಸ್ವಾಮಿ ಮತ್ತು ಇನ್ನೊಬ್ಬರು

**ದೋಷಾರೋಪಣೆ**

ನಾನು, ಶ್ರೀ ಎಸ್.ಎ. ಹಿದಾಯತ್ ಉಲ್ಲಾ ಷರೀಫ್., ಬಿ.ಎ., ಎಲ್.ಎಲ್.ಎಂ., IIIನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ, ಈ ಮೂಲಕ ನಿಮ್ಮನ್ನು ಈ ಕೆಳಗೆ ಹೇಳಿದಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆ.

ಆರೋಪಿತ : 1. ದೊಡ್ಡಯ್ಯ ಅಲಿಯಾಸ್ ಪುಟ್ಟಸ್ವಾಮಿ
ಬಿನ್ಃ ಲೇಟ್ ಬೀರಯ್ಯ, ಕೂಲಿ,
ವಯಸ್ಸುಃ 48 ವರ್ಷ,

2. ಕುಮಾರ ಎಂ ಕೆ
ಬಿನ್ಃ ಲೇಟ್ ಕಾಡಯ್ಯ
ವಯಸ್ಸುಃ 38 ವರ್ಷ, ಕೂಲಿ
ಇಬ್ಬರೂ ವಾಸಃ ಮಂಕುಂದ ಗ್ರಾಮ,
ಮಳೂರು ಹೋಬಳಿ,
ಚನ್ನಪಟ್ಟಣ ತಾಲ್ಲೂಕು.**(ಮೃತಪಟ್ಟಿರುತ್ತಾರೆ)**

****

**ಮೊದಲನೇಯದಾಗಿ**, ದಿನಾಂಕಃ 29.03.2021 ರಂದು ರಾತ್ರಿ 10.30 ಗಂಟೆ ಸಮಯದಲ್ಲಿ ಎಂ ಕೆ ದೊಡ್ಡಿ ಪೊಲೀಸ್ ಠಾಣಾ ಸರಹದ್ದಿನ ಮಂಕುಂದ ಗ್ರಾಮದಲ್ಲಿ ಚಾಸಾ 1 ಚಿಕ್ಕಕಲ್ಲಯ್ಯರವರು ಅವರ ಮನೆಯಲ್ಲಿ ಊಟ ಮಾಡಿ ಮಲಗಿದ ನಂತರ 1 ನೇ ಆರೋಪಿಯಾದ ನೀವು ಈ ಪ್ರಕರಣದಲ್ಲಿ ಮೃತಪಟ್ಟಿರುವ 2 ನೇ ಆರೋಪಿಯೊಂದಿಗೆ ಸಮಾನ ಉದ್ದೇಶದಿಂದ ಸೇರಿಕೊಂಡು ಹಳೆಯ ದ್ವೇಷವನ್ನಿಟ್ಟುಕೊಂಡು ಚಾಸಾ 1 ಚಿಕ್ಕಕಲ್ಲಯ್ಯ ರವರ ಮನೆಯನ್ನು ನಾಶಪಡಿಸುವ ಉದ್ದೇಶದಿಂದ ಮನೆಯ ಮುಂದಿನ ಗರಿಶೆಡ್ಡಿಗೆ ಬೆಂಕಿ ಹಚ್ಚಿ ಕೇಡುಂಟು ಮಾಡಿದ್ದು ಇದರ ಪರಿಣಾಮ ಗರಿಶೆಡ್ಡು ಸಂಪೂರ್ಣವಾಗಿ ಸುಟ್ಟು ಹೋಗಿ ಶೆಡ್ಡಿನಲ್ಲಿದ್ದ ಪ್ಲಾಸ್ಟಿಕ್ ಬಿಂದಿಗೆಗಳು, ನೀರಿನ ಡ್ರಂಗಳು, ನೀರಿನ ಪೈಪ್,

ಹಸುಗಳಿಗೆ ಹಾಕಲು ತಂದಿಟ್ಟಿದ್ದ ಉರುಳಿ ಹೊಟ್ಟು, ಸೈಕಲ್ ನ ಸೀಟ್ ಮತ್ತು ಟೈರ್ ಗಳು, ಟಿ ವಿ ಎಸ್ ದ್ವಿಚಕ್ರ ವಾಹನದ ಸೀಟ್ ಸುಟ್ಟು ಹೋಗಿದ್ದು ಇದರಿಂದ ಚಾಸಾ 1 ಚಿಕ್ಕಕಲ್ಲಯ್ಯರವರಿಗೆ ರೂ.20,000/- ಗಳಷ್ಟು ನಷ್ಟ ಉಂಟು ಮಾಡಿ ನೀವು ಭಾರತ ದಂಡ ಸಂಹಿತೆ, **ಕಲಂ 436 ಸಹಕಲಂ 34** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಮಾಡಲಾಗಿದೆ.

ನಾನು ನಿಮ್ಮನ್ನು ಮೇಲೆ ಹೇಳಿದ ದೋಷಾರೋಪಣೆಗೆ ವಿಚಾರಣೆ ಆಗತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ದಿನಾಂಕ: 18.06.2026.

(ಎಸ್.ಎ. ಹಿದಾಯತ್ ಉಲ್ಲಾ ಷರೀಫ್ )
III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ

**<u>III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ</u>**

**<u>ಸತ್ರ ಪ್ರಕರಣ ಸಂಖ್ಯೆ : 105/2024</u>**

ಪಿರ್ಯಾದಿ : ಎಂ ಕೆ ದೊಡ್ಡಿ ಆರಕ್ಷಕ ಠಾಣೆ,
ರಾಜ್ಯದ ಪರವಾಗಿ

ವಿರುದ್ಧ

ಆರೋಪಿ : 1. ದೊಡ್ಡಯ್ಯ ಅಲಿಯಾಸ್ ಪುಟ್ಟಸ್ವಾಮಿ

**<u>ದೋಷಾರೋಪಣೆ</u>**

ಪ್ರಶ್ನೆ.1: ಈಗ ಓದಿ ಹೇಳಿ ವಿವರಿಸಿದ ದೋಷಾರೋಪಣೆ ನಿಮಗೆ ಅರ್ಥ ಆಗಿರುತ್ತದೆಯೇ?
ಉತ್ತರಃ

ಪ್ರಶ್ನೆ.2: ನೀವು ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಆಗಬೇಕೇ?
ಉತ್ತರಃ

(ಆರೋಪಿಯನ್ನು ಮೇಲೆ ಹೇಳಿದಂತೆ ನನ್ನ ಸಮ್ಮುಖದಲ್ಲಿ ಪ್ರಶ್ನೆ ಮಾಡಿದ್ದು ಅವರು ಕೊಟ್ಟ ಉತ್ತರವನ್ನು ಅವರು ಕೊಟ್ಟಂತೆಯೇ ತೆಗೆದುಕೊಂಡಿರುತ್ತದೆ ಎಂದು ಈ ಪ್ರಮಾಣ ಪತ್ರ).

ದಿನಾಂಕ: 18.06.2026

(ಎಸ್.ಎ. ಹಿದಾಯತ್ ಉಲ್ಲಾ ಷರೀಫ್ )
III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ

**III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ**

**ಸತ್ರ ಪ್ರಕರಣ ಸಂಖ್ಯೆ : 105/2024**

ಪಿರ್ಯಾದಿ : ಎಂ ಕೆ ದೊಡ್ಡಿ ಆರಕ್ಷಕ ಠಾಣೆ,
ರಾಜ್ಯದ ಪರವಾಗಿ

ವಿರುದ್ಧ

ಆರೋಪಿ : 2. ಕುಮಾರ ಎಂ ಕೆ

**ದೋಷಾರೋಪಣೆ**

ಪ್ರಶ್ನೆ.1: ಈಗ ಓದಿ ಹೇಳಿ ವಿವರಿಸಿದ ದೋಷಾರೋಪಣೆ ನಿಮಗೆ ಅರ್ಥ ಆಗಿರುತ್ತದೆಯೇ?
ಉತ್ತರಃ

ಪ್ರಶ್ನೆ.2: ನೀವು ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಆಗಬೇಕೇ?
ಉತ್ತರಃ

(ಆರೋಪಿಯನ್ನು ಮೇಲೆ ಹೇಳಿದಂತೆ ನನ್ನ ಸಮ್ಮುಖದಲ್ಲಿ ಪ್ರಶ್ನೆ ಮಾಡಿದ್ದು ಅವರು ಕೊಟ್ಟ ಉತ್ತರವನ್ನು ಅವರು ಕೊಟ್ಟಂತ್ತೆಯೇ ತೆಗೆದುಕೊಂಡಿರುತ್ತದೆ ಎಂದು ಈ ಪ್ರಮಾಣ ಪತ್ರ).

ದಿನಾಂಕ: 18.06.2026

(ಎಸ್.ಎ. ಹಿದಾಯತ್ ಉಲ್ಲಾ ಷರೀಫ್ )
III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ